ಗಡಿಭಾಗದ ಗ್ರಾಮಗಳಲ್ಲಿ ಅಗತ್ಯ ಸೌಲಭ್ಯಗಳಲ್ಲದಿರುವುದು

529 - ಶ್ರೀ ರಾಮದಾಸ್ ಎ. (ಕೃಷ್ಣರಾಜ) : ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗಡಿಭಾಗದ ಗ್ರಾಮಗಳಲ್ಲಿ ಅಗತ್ಯ ಸೌಲಭ್ಯಗಳಿಲ್ಲದೇ ಅಲ್ಲಿನ ಗ್ರಾಮಸ್ಥರು ತಮ್ಮ ಹಳ್ಳಿಗಳನ್ನು ಪಕ್ಕದ ರಾಜ್ಯಗಳಿಗೆ ಸೇರಿಸಲು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಆ ಗ್ರಾಮಗಳ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಯೋಜನೆ ಏನಾದರೂ ರೂಪಿಸಿದೆಯೇ (ವಿವರ ನೀಡುವುದು)

ಇ) ಚಾಮರಾಜನಗರ-ತಮಿಳುನಾಡು ಗಡಿಭಾಗದ ಗ್ರಾಮಗಳಿಗೆ ಸರ್ಕಾರದ ಯೋಜನೆಗಳೇನು?

ಶ್ರೀಮತಿ ಸುಮ ವಸಂತ (ಯೋಜನಾ ಮತ್ತು ಹೆಚ್‌ಕೆಡಿಬಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಗಡಿ ತಾಲ್ಲೂಕುಗಳ ಅಭಿವೃದ್ಧಿಗಾಗಿ ಗಡಿಪ್ರದೇಶಾಭಿವೃದ್ಧಿ ಯೋಜನೆಯನ್ನು 1999-92 ರಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಇ) 1999-2000ರಲ್ಲಿ 5.18 ಲಕ್ಷ ರೂ.ಗಳನ್ನು ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳು, ಚಾಮರಾಜನಗರ ಇವರಿಗೆ ಬಿಡುಗಡೆ ಮಾಡಲಾಗಿದೆ.

ಮನೆ ಮತ್ತು ನಿವೇಶನ ಮಂಜೂರಾತಿ

530 - ಶ್ರೀ. ರಾಮದಾಸ್. ಎ (ಕೃಷ್ಣರಾಜ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದೆಯವಿಟ್ಟು ಉತ್ತರಿಸುರೆ?

ಅ. ರಾಜ್ಯದಲ್ಲಿ ಕರ್ನಾಟಕ ಗೃಹ ಮಂಡಳಿಯ ಹಂಚಿಕೆ ಮಾಡದೇ ಇರುವ ಮನೆಗಳ ಹಾಗೂ ನಿವೇಶನಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ. ಈ ಮನೆಗಳನ್ನು ಕಟ್ಟಿರುವುದು ಎಂದು

ಇ. ಮನೆಗಳನ್ನು ಮಾರಾಟ ಮಾಡದೇ ಇರಲು ಕಾರಣಗಳೇನು?

ಈ. ಮಾರಾಟ ಮಾಡಿದ ಮನೆಗಳನ್ನು ಸ್ವಾಧೀನ ನೀಡದೆ ಇರುವ ಪ್ರಕರಣಗಳ ಸಂಖ್ಯೆ ಎಷ್ಟು? ಹಾಗೂ ಸ್ವಾಧೀನ ನೀಡದಿರಲು ಕಾರಣವವೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು.) :

ಅ. ರಾಜ್ಯದಲ್ಲಿ ಮಂಡಳಿಯಲ್ಲಿ ಪ್ರಸ್ತುತ 1693 ಮನೆಗಳು ಹಾಗೂ 924 ನಿವೇಶನಗಳು ಖಾಲಿ ಇರುತ್ತವೆ. ಜಿಲ್ಲಾವಾರು ವಿವರವನ್ನು ಅನುಬಂಧ- 'ಅ' ನಲ್ಲಿ ಲಗತ್ತಿಸಿದೆ.

ಆ. ಪ್ರಸ್ತುತ ಖಾಲಿ ಇರುವ ಮನೆಗಳು 1999ರ ಅವಧಿಯವರೆಗೂ ಆಯಾ ಬಡಾವಣೆಗಳಲ್ಲಿ ಹಂತ ಹಂತವಾಗಿ ನಿರ್ಮಾಣ ಮಾಡಿದ್ದು ವಿವರವನ್ನು ಅನುಬಂಧ-'ಆ' ನಲ್ಲಿ ಲಗತ್ತಿಸಿದೆ.

ಇ. ಆಯಾ ಬಡವಾಣೆಗಳಲ್ಲಿ ಹಂಚಿಕೆ ರದ್ದತಿಯಿಂದ ಮನೆ : ನಿವೇಶನಗಳು ಖಾಲಿಯಾಗಿ ಉಳಿದಿವೆ. ಹಂಚಿಕೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ಕಡಿಮೆ ಬೇಡಿಕೆಯಿದ್ದು ಅರ್ಜಿಗಳು ಇಲ್ಲದೆ ಇರುವುದರಿಂದ ಸಾರ್ವಜನಿಕರಿಂದ ಅರ್ಜಿಗಳನ್ನು ಮತ್ತೆ ಆಹ್ವಾನಿಸಿ ಹಂಚಿಕೆ ಮಾಡಲು ತೀರ್ಮಾನ ತೆಗೆದುಕೊಳ್ಳಲಾಗಿದೆ.

ಈ. ಮಾರಾಟ ಮಾಡಿರುವ ಮನೆಗಳಲ್ಲಿ ಸ್ವಾಧೀನ ನೀಡದಿರುವ ಒಟ್ಟು ಮನೆಗಳು- 5969.

1. ಕೆಲವು ಹಂಚಿಕೆದಾರರು ಸಂಪೂರ್ಣವಾಗಿ ಪ್ರಾರಂಭಿಕ ಠೇವಣಿ ಪಾವತಿ ಮಾಡಿರುವುದಿಲ್ಲ.

2. ಕೆಲವು ಹಂಚಿಕೆದಾರರು ಗುತ್ತಿಗೆ ಕರಾರು ಪತ್ರ ಪಡೆದು ನೋಂದಣಿ ಮಾಡಿಸಿಕೊಂಡಿರುವುದಿಲ್ಲ.

3. ಕೆಲವು ಹಂಚಿಕೆದಾರರು ಗುತ್ತಿಗೆ ಕರಾರು ಪತ್ರ ನೋಂದಣಿ ಮಾಡಿಸಿಕೊಂಡು ನಂತರ ಸ್ವಾಧೀನ ಪತ್ರ ಪಡೆದಿರುವುದಿಲ್ಲ ಇವರೆಲ್ಲರಿಗೂ ಕೂಡಲೇ ಸ್ವಾಧೀನ ಪಡೆಯಲು ತಿಳುವಳಿಕೆ ಕೊಡಲಾಗಿದೆ.

4. ಕೆಲವು ಬಡಾವಣೆಗಳಲ್ಲಿ ನೀರು ಮತ್ತು ವಿದ್ಯುತ್ ಸಂಪರ್ಕದ ಕೆಲಸಗಳು ನಡೆಯುತ್ತಿರುವುದರಿಂದ ಈ ಕೆಲಸಗಳನ್ನು ಕೂಡಲೇ ಪೂರೈಸಲು ಮತ್ತು ಸ್ವಾಧೀನ ಕೊಡಲು ಕ್ರಮಕೈಗೊಳ್ಳಲಾಗಿದೆ.

ಅನುಬಂಧ - ಅ ANNEXURE - A

ರಾಜ್ಯದಲ್ಲಿ ಮಂಜೂರು ಮಾಡದೇ ಕರ್ನಾಟಕ ಗೃಹ ಮಂಡಳಿಯಲ್ಲಿ ಖಾಲಿ ಇರುವ ಮನೆಗಳ ವಿವರ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮನೆಗಳು	ನಿವೇಶನಗಳು
1.	ಬೆಂಗಳೂರು	173	62
2.	ಬೆಂಗಳೂರು ಗ್ರಾಮಾಂತರ	55	-
3.	ಕೋಲಾರ	7	-
4.	ಮಂಡ್ಯ	-	17
5.	ಮೈಸೂರು	595	38
6.	ಚಾಮರಾಜನರ	-	5
7.	ಹಾಸನ	173	363
8.	ಧಾರವಾಡ	106	62
9.	ಉತ್ತರ ಕನ್ನಡ	14	250
10.	ಬಳ್ಳಾರಿ	62	85
11.	ರಾಯಚೂರು	206	17
12.	ಕೊಪ್ಪಳ	66	-
13.	ಬೆಳಗಾಂ	--	05
14.	ಬಿಜಾಪುರ	9	18
15.	ಗುಲ್ಬರ್ಗಾ	223	2
16.	ಬೀದರ್	4	-
	ಒಟ್ಟು	**1693**	**924**

ಅನುಬಂಧ - ಆ ANNEXURE - B

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸ್ಥಳ ಬಡಾವಣೆ	ಖಾಲಿ ಇರುವ ಮನೆಗಳು	ಈ ಮನೆಗಳನ್ನು ಕಟ್ಟಿ ಎಷ್ಟು ವರ್ಷಗಳಾಗಿವೆ.
1.	ಬೆಂಗಳೂರು	ಕೆಂಗೇರಿ ಉಪನಗರ	153	10
2.	ಬೆಂಗಳೂರು	ಯಲಹಂಕ ಉಪನಗರ		
		5ನೇ ಹಂತ	20	2
3.	ಬೆಂಗಳೂರು	ಬಿಡದಿ	15	8
	ಗ್ರಾಮಾಂತರ	ಕನಕಪುರ	40	10
4.	ಕೋಲಾರ ಜಿಲ್ಲೆ	ಆರೋಹಳ್ಳಿ	7	8
5.	ಮಂಡ್ಯ	-	-	-
6.	ಮೈಸೂರು	ಊಟಗಳ್ಳಿ ಒಂದನೇ ಹಂತ	108	14
		ಊಟಗಳ್ಳಿ 2ನೇ ಹಂತ	268	11
		ಬನ್ನೂರು	219	8
7.	ಹಾಸನ	ಬೀರನಹಳ್ಳಿ 2ನೇ ಹಂತ	163	9
		ಸಕಲೇಶಪುರ	2	10
		ಅಂಕಲಗೂಡು	8	10
8.	ಧಾರವಾಡ	ಹಿರೇಕೇರೂರು	106	6
9.	ಉತ್ತರ ಕನ್ನಡ	ಕಾರವಾರ	14	12
10.	ಬಳ್ಳಾರಿ	ಸಂಡೂರು	46	-
		ಕೂಡ್ಲಿಗಿ	16	7
11.	ರಾಯಚೂರು	ಪೋತಗಲ್	206	1
12.	ಕೊಪ್ಪಳ	ಕುಷ್ಟಗಿ	31	8
		ಯಲಬುರ್ಗಾ	35	7
13.	ಬಿಜಾಪುರ	ಬಿಜಾಪುರ	9	7
14.	ಗುಲ್ಬರ್ಗಾ	ಕೋಟನೂರು	93	5
		ಬಡೇಪುರ 4ನೇ ಹಂತ	32	6
		ಶಹಾಪುರ	77	14
		ಸೇಡಂ	23	5
15.	ಬೀದರ್	ಬೀದರ್, ಬಾಲ್ಕಿ	4	2
	ಒಟ್ಟು	**1693**		